ಶ್ರೀಃ

ಸಂಕ್ಷಿಪ್ತ ಪೂಜಾಪದ್ಧತಿಃ

(ಪ್ರತಿ ಶುಕ್ರವಾರ ಕುಂಕುಮಾರ್ಚನ ಮಾಡುವವರಿಗಾಗಿ)

ಸಂಗ್ರಾಹಕರು :

ಆಗಮ-ಜ್ಯೌತಿಷ-ಶ್ರೌತ ಸ್ಮಾರ್ತ-ವೇದಾಂತ-ಪರಿಣತಃ

ಕೆ. ಗಣಪತಿ ಸೋಮಯಾಜೀ

ಪ್ರಾಪ್ತಿಸ್ಥಾನಂ, ಶ್ರೀ ಪ್ರಸನ್ನಾಂಜನೇಯ ಸ್ವಾಮಿ ದೇವಾಲಯ
ರಾಗಿಗುಡ್ಡ, ಜೆ. ಪಿ ನಗರ, ಬೆಂಗಳೂರು-69

॥ ಶ್ರೀ ಮಹಾಗಣಪತಯೇ ನಮಃ ॥

ಆಸ್ತಿಕ ಭಕ್ತಜನರಲ್ಲಿ ನಮ್ರ ನಿವೇದನೆಗಳು

ಭಗವಂತನು ಭಗವದ್ಗೀತೆಯಲ್ಲಿ **"ದೇವಾನ್ ಭಾವಯತಾನೇನ ತೇ ದೇವಾ ಭಾವಯನ್ತುವಃ । ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ"** — ದೇವರು ನಮಗೆ ಒದಗಿಸಿಕೊಟ್ಟ ಸಂಪತ್ತನ್ನು ದೇವರಿಗೆ ಸಮರ್ಪಿಸಿ ಪರಸ್ಪರ ಹೊಂದಾಣಿಕೆಯಿಂದ ಜೀವಿಸುವುದು ಸೂಕ್ತವಾದುದು- ಎಂದು ತಿಳಿಸಿರುವನು. ಅದರಲ್ಲಿ ಅತ್ಯಮೂಲ್ಯವಾದ ಮನುಷ್ಯ ಜನ್ಮದಲ್ಲಿ ಅಂಗವಿಕಲನಾಗದೆ ಹುಟ್ಟಿರುವವನು ತನ್ನನ್ನೇ ಸ್ವಾಮಿಗೆ ಸಮರ್ಪಿಸಿಕೊಂಡರೆ ಆಗ ಅವನ ನರಜನ್ಮಸಾರ್ಥಕವಾಗುವುದರಲ್ಲಿ ಸಂಶಯವಿಲ್ಲ. ಆದಕ್ಕಾಗಿ ಹಲವಾರು ಸಾಧನಗಳನ್ನು ತಿಳಿಸಿರುವವರಲ್ಲದೆ ದೇವತಾರಾಧನೆಯನ್ನೂ ಒಂದನ್ನಾಗಿ ಸೇರಿಸಿರುವರು ತನ್ನ ಕುತ್ತಿಗೆಯಲ್ಲಿರುವ ಚಿನ್ನದ ಹಾರವನ್ನು ಕನ್ನಡಿಯಲ್ಲಿ ನೋಡಿ ತಾನೂ ಆನಂದ ಪರವಶನಾಗುವಂತೆ, ತನ್ನ ಹೃದಯದಲ್ಲಿ ಸನ್ನಿಹಿತನಾಗಿರುವ ಶಿವನನ್ನು ತಾನು ಸಾಕ್ಷಾತ್‌ನೋಡಿ ಸಂತೋಷಪಡುವ ಮಾರ್ಗವೇ ಈ ದೇವ ಪೂಜೆಯು. ಇದರ ಬಗೆಗೆ ಬಹಳ ನಿಯಮಗಳಿದ್ದು, ಈ ಕಾಲದಲ್ಲಿ ಅಷ್ಟನ್ನು ಯಾರಿಂದಲೂ ಆಚರಿಸಲು ಸಾಧ್ಯವಿಲ್ಲದಿರುವುದರಿಂದ ಸುಲಭವಾಗಿ (ಸ್ವಲ್ಪಕಾಲದಲ್ಲಿಯಾದರೂ) ಪೂಜಿಸುವ ವಿಧಾನವನ್ನು ಬಹು ಜನರು ಅಪೇಕ್ಷಿಸುತ್ತಿದ್ದರಿಂದ, ಅದರಲ್ಲಿಯೂ, ಮನೆ, ಕಾರ್ಯಾಲಯ-ಮುಂತಾದುವುಗಳಲ್ಲಿ ಅಹೋರಾತ್ರಗಳಲ್ಲಿಯೂ ದುಡಿಯುತ್ತಿರುವ ಮಹಿಳೆಯರಿಗೆ ಕೇವಲ ಶುಕ್ರವಾರದ ದಿವಸದಲ್ಲಿಯಾದರೂ, ಒಂದು ಘಂಟೆಯ ಕಾಲ ದೇವರ ಸನ್ನಿಧಾನದಲ್ಲಿ ಪ್ರಪಂಚವ್ಯವಹಾರವನ್ನು ಮರೆಯಲು ಸಾಧ್ಯವಾಗುವಂತೆ ಯೋಚಿಸಿ **"ಲಲಿತಾ ಸಹಸ್ರನಾಮಪೂರ್ವಕ ಕುಂಕುಮಾರ್ಚನೆ"**ಯನ್ನು

ಮಾಡಿ ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗುವಂತಹ ಅವಕಾಶ ಕೊಡಿಸುವ ಸಲುವಾಗಿ ರಾಗಿಗುಡ್ಡದ ಭಕ್ತಮಂಡಲಿ ಯೋಚಿಸಿ, ಅದಕ್ಕೆ ಅನುಕೂಲವಾಗುವಂತೆ ಈ ಪುಸ್ತಕವನ್ನು ತಯಾರಿಸುವಂತೆ ನನಗೆ ತಿಳಿಸಿದೆ. ನಾನು ಸಂತೋಷದಿಂದ ಒಪ್ಪಿ ತಮ್ಮ ಮುಂದೆ ಈ ಕಿರುಹೊತ್ತಿಗೆಯನ್ನು ಇಡುತ್ತಿರುವೆನು.

ಪೂಜಿಸುವ ಮೊದಲು ಪೂಜೆಯ ವಿಧಾನವನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿದ್ದಲ್ಲಿ ಅನುಕೂಲವಾದೀತೆಂದು ತಿಳಿದು ಈ ಕೆಳಗಿನ ಅಂಶಗಳನ್ನು ಭಕ್ತರ ಮುಂದಿಡುತ್ತಿದ್ದೇನೆ.

ಮೂರ್ತಿಪೂಜೆ ಏಕೆ ಮಾಡಬೇಕು ?

ಇದು ಈಗ ಸಾಮಾನ್ಯ ಜನರೂ ಕೇಳುವ ಪ್ರಶ್ನೆಯಾಗಿದೆ. ಸರ್ವವ್ಯಾಪ್ತಿಯಾದ ಪರಮಾತ್ಮನು ಹೃದಯದಲ್ಲಿಯೇ ಇರುವಾಗ, ಇನ್ನೊಂದು ಮೂರ್ತಿಯ ಅಪೇಕ್ಷೆಯೇ ಇರುವುದಿಲ್ಲ. ಆದರೂ ಅವನನ್ನು ತನ್ನಲ್ಲಿಯೇ ನೋಡಿಕೊಳ್ಳುವ ಸಲುವಾಗಿ, ಅವನ ಹೆಚ್ಚಿನ ಸಾನ್ನಿಧ್ಯಕ್ಕಾಗಿ ಮೂರ್ತಿಪೂಜೆ ಮಾಡಬೇಕೆನ್ನುವುದು ಶಾಸ್ತ್ರ. ಹಗಲಿನಲ್ಲಿಯೂ ದೀಪವನ್ನಿಟ್ಟುಕೊಂಡು ಕೆಲಸಮಾಡುವವರು, ಕುಳಿತಿರುವ ಸ್ಥಳದಲ್ಲಿ ವಿಶೇಷವಾಯುಯಂತ್ರವನ್ನು ಇಟ್ಟುಕೊಳ್ಳುವವರು, ಬೆಳಕು, ಗಾಳಿ–ಇಲ್ಲವೆಂದು ಅವುಗಳ ಅಪೇಕ್ಷೆಪಡುವುದಿಲ್ಲ ; ಅವುಗಳ ಹೆಚ್ಚಿನ ಸಾನ್ನಿಧ್ಯಕ್ಕಾಗಿ, ಅದರಂತೆಯೇ ಪರಮಾತ್ಮನು ಗಾಳಿ ಬೆಳಕಿನಂತೆ ಸರ್ವವ್ಯಾಪಿಯಾಗಿದ್ದರೂ ಅವನ ಹೆಚ್ಚಿನ ಸಾನ್ನಿಧ್ಯಕ್ಕೆ ಮೂರ್ತಿಯನ್ನು ಪೂಜಿಸಬೇಕೆಂದಿರುವರು. ಕ್ರಮೇಣ ಪರಮಾತ್ಮನನ್ನು ಹೊಂದುವುದು ಮೇಲ್ತರದ ಸಾಧನೆ. ಹೊರಗಿನಪೂಜೆಯು ಶಕ್ತಿಯನ್ನು ಬೆಳೆಸುವ ದಾರಿ. ಆದುದರಿಂದ ಮನಸ್ಸು, ಪೂಜೆಯ ಮನಃಪೂರ್ವಕತೆಯಿಂದ ಮೂರ್ತಿಗಳಲ್ಲಿ ಆಗಾಗ ಕೇಂದ್ರೀಕೃತವಾದಲ್ಲಿ ಕಸ್ತೂರಿಯ ಕರಡಿಕೆಯೂ ಪರಿಮಳ ಕೊಟ್ಟಂತೆ ಧಾರಾಳವಾಗಿ ಕೆಲಸಮಾಡುವ ಶಕ್ತಿಪಡೆದೀತು.

ಪೂಜೆಯಿಂದ ಫಲವೇನು ?

ಕಲಿಯುಗದಲ್ಲಿ ಮುಕ್ತಿಯನ್ನು ಪಡೆಯಲು ಪೂಜೆಯೇ ಮುಖ್ಯಸಾಧನವಾಗಿದೆ. ಹರಿಯ ಪಾದೋದಕವು ಸಕಲಪಾತಕಗಳಿಗೂ ಪ್ರಾಯಶ್ಚಿತ್ತರೂಪ

shrinidhi.udupa@gmail.com

ಮಾದುದಲ್ಲದೆ, ಶಿರಸ್ಸಿನಲ್ಲಿ ಧರಿಸಿದರೆ ಅಥವಾ ಕುಡಿದರೆ ಸಕಲ ದೇವತೆಗಳೂ ತೃಪ್ತರಾಗುವರು. ಅಜ್ಞಾನ ಅಥವಾ ಆಲಸ್ಯದಿಂದ ಪೂಜಿಸದೆ ಭೋಜನ ಮಾಡಿದರೆ ನರಕಪ್ರಾಪ್ತಿಯಾಗುವುದು—ಎಂದೂ ಹೇಳಿದೆ. ಪೂಜೆಯನ್ನು ಮುಗಿಸಿ, ಮಾತಾ ಪಿತೃಗಳನ್ನು ಪೂಜಿಸುವುದು. ಅವರ ಆಶೀರ್ವಾದವನ್ನು ಪಡೆದ ಮೇಲೆ ಮುಂದಿನ ಕರ್ತವ್ಯ.

ಪೂಜೆಯ ಕಾಲ

"ದೇವೈರ್ಭುಕ್ತಂತು ಪೂರ್ವಾಹ್ಣೇ"-ದೇವತೆಗಳು ಮಧ್ಯಾಹ್ನಕ್ಕಿಂತ ಮೊದಲು ಊಟಮಾಡುವರು-ಎಂದಿರುವುದರಿಂದ ಸಾಧ್ಯವಾದಷ್ಟು ಮಟ್ಟಿಗೆ ಮಧ್ಯಾಹ್ನವಾಗುವುದಕ್ಕೆ ಮೊದಲೇ ದೇವರನ್ನು ಪೂಜಿಸಬೇಕು. ಪೂಜೆಯಲ್ಲಿ ಹದಿನಾರು ಉಪಚಾರಗಳು ಮುಖ್ಯವಾಗಿವೆ. ಈ ಪ್ರತಿಯೊಂದು ಉಪಚಾರಗಳಿಗೂ ಭಕ್ತಿಯಿಂದ ಪುಷ್ಪಾಕ್ಷತೆಗಳನ್ನು ಸಮರ್ಪಿಸುವುದು ಅತ್ಯುತ್ತಮ.

ಪೂಜೆಗೆ ಪುಷ್ಪಗಳು

ಪುಷ್ಪಗಳು ಹಳತಾಗಿರಬಾರದು. ಛಿದ್ರವಾಗಿರಕೂಡದು. ಅದರಲ್ಲಿ ಜಂತುವಿರಬಾರದು. ತನ್ನ ತೋಟದಲ್ಲಿ ಬೆಳೆದದ್ದು ಅತಿಶ್ರೇಷ್ಠವು. ಪುಷ್ಪಗಳು ಇಲ್ಲದಿದ್ದಾಗ ಪತ್ರಗಳಿಂದ ಪೂಜಿಸಬಹುದು. ವಿಕ್ರಯಪುಷ್ಪ ಶ್ರೇಷ್ಠವಲ್ಲ. ನಿತ್ಯ ಪೂಜೆಗಾಗಿ ಬೇರೆಯವರ ತೋಟದಿಂದ ತಂದರೂ ಅದು ಚೋರತನವೆನಿಸುವುದಿಲ್ಲ ಎಂದಿರುವರು. ದೇವರ ಪೂಜೆಗೆ ಪುಷ್ಪಗಳನ್ನು ಕೊಂಡು ಬರುವಾಗ ಬೇರೆಯವರಿಗೆ ನಮಸ್ಕರಿಸಿದರೆ ಅವು ನಿರ್ಮಾಲ್ಯಗಳಾಗುವುವು-ಎಂಬ ಹಲವಾರು ನಿಯಮಗಳಿವೆ. ಅಲ್ಲದೆ ಪತ್ರ ಪುಷ್ಪಗಳನ್ನು ದೇವರಮೇಲೆ ಇಡುವ ಬಗೆಗಳಿಗೂ ಹಲವಾರು ಕ್ರಮಗಳಿರುವುವು. ಬಲ್ಲವರಿಂದ ತಿಳಿಯುವುದುತ್ತಮ.

ದೇವರ ಬಿಂಬ

ಮನೆಯಲ್ಲಿ ಸಾಧ್ಯವಾದಷ್ಟೂ ಚಿಕ್ಕಮೂರ್ತಿಯನ್ನಿಟ್ಟು ಪೂಜಿಸುವುದು ಉತ್ತಮ. ದೊಡ್ಡಮೂರ್ತಿಯನ್ನಿಟ್ಟು ಅಪರೂಪಕ್ಕೆ ಒಮ್ಮೆ ಪೂಜಿಸುವುದರಿಂದ ಅನರ್ಥವೂ ಆಗುವುದು. ಹೆಬ್ಬೆಟ್ಟಿಕಿಂತ ದೊಡ್ಡಮೂರ್ತಿಯು

ಮನೆಯಲ್ಲಿರಬಾರದು. ಚಿತ್ರಪಟವೇ ಈ ಕಾಲಕ್ಕೆ ಹೆಚ್ಚು ಉಪಯುಕ್ತವೆನ್ನಬಹುದು. ಭಕ್ತರು ತಮ್ಮ ಕುಲದೇವತೆ ಹಾಗೂ ಇಷ್ಟದೇವತೆಗಳ ಚಿತ್ರಪಟದಿಂದಲೇ ತಮ್ಮ ಅಭೀಷ್ಟಸಿದ್ಧಿಯನ್ನು ಪಡೆಯಬಹುದಾಗಿದೆ.

ಪೂಜಾಸ್ಥಳ

ಪೂಜೆಯ ಜಾಗವು ಶುದ್ಧವಾಗಿ, ಶಾಂತವಾಗಿ ಹಾಗೂ ಪ್ರತ್ಯೇಕವಾಗಿ ಇದ್ದಷ್ಟೂ ಉತ್ತಮ. ಅಲ್ಲಿ ದೇವರ ಚಿತ್ರಗಳನ್ನು ಪೂರ್ವಮುಖ ಅಥವಾ ಪಶ್ಚಿಮ ಮುಖವಾಗಿ ಇಡಬೇಕು. ಅನುಕೂಲವಿಲ್ಲದಲ್ಲಿ ಬಡಗು ಮುಖವಾಗಿ ಇಡಬಹುದು. ಪೂಜಕನು ಪೂರ್ವಮುಖ ಅಥವಾ ಉತ್ತರ ಮುಖನಾಗಿ ಪಟಗಳ ಬದಿಯಲ್ಲಿ ಕುಳಿತು ಕೊಳ್ಳಬೇಕು. ಪೂಜೆಯ ಸ್ಥಳದಲ್ಲಿ ದಂಪತಿಗಳು ಅಥವಾ ಇತರರು ಮಲಗಬಾರದು. ಬೇರೆ ಸ್ಥಳವಿಲ್ಲದಿದ್ದಲ್ಲಿ ಆ ಸ್ಥಳವನ್ನು ಮರದ ಹಲಗೆಯಿಂದ ಅಥವಾ ಇತರ ಸಾಧನಗಳಿಂದ ಪ್ರತ್ಯೇಕಿಸಿಕೊಳ್ಳಬೇಕು.

ಪೂಜಾಕ್ರಮ

ವಿಷ್ಣುವನ್ನು ಅಕ್ಷತೆಗಳಿಂದ ಪೂಜಿಸಬಾರದು. ತುಳಸಿಯು ಉತ್ತಮ. ಗಣಪತಿಗೆ ತುಳಸಿಯು ಆಗದು. ಅದರಂತೆಯೇ ದೇವಿಗೆ ದೂರ್ವೆ(ಗರಿಕೆ) ಒಳಿತಲ್ಲ. ಅಂಗೈಯಲ್ಲಿ ಗಂಧ, ಪುಷ್ಪ, ಅಕ್ಷತೆಗಳನ್ನು ಇಟ್ಟುಕೊಂಡು ಹೆಬ್ಬೆಟ್ಟಿನ ತುದಿಯನ್ನು ತೋರುಬೆರಳ ತುದಿಗೆ ತಾಗಿಸಿಕೊಂಡು ಉಳಿದ ಮೂರು ಬೆರಳುಗಳನ್ನು ನೇರವಾಗಿ ಕೆಳಮುಖವಾಗಿ ಚಾಚಿ, ಉದ್ಧರಣೆಯಿಂದ ಅಂಗೈಗೆ ನೀರನ್ನು ಬಿಟ್ಟು ಅದನ್ನು ಈ ಕೆಳಮುಖ ಬೆರಳುಗಳ ತುದಿಯಿಂದ ಬೀಳಿಸುವುದು—ಇದು ದೇವರ ಅರ್ಘ್ಯದ ವಿಧಾನವು.

ಅಭಿಷೇಕ

ಸಾಲಿಗ್ರಾಮ ಮತ್ತು ಶಿವಲಿಂಗದ ಪೂಜೆಯಲ್ಲಿ ಅಭಿಷೇಕವು ಮುಖ್ಯವಾದುದು. ಅದು ಅರ್ಚಕರಿಗೆ ಕೇವಲ ಪಾಪಹರವಲ್ಲದೆ ಅದರಿಂದ ಒದಗುವ ತೀರ್ಥವು ಶುದ್ಧಭಾವನೆಯನ್ನು ಉಂಟುಮಾಡುವುದು. ಉಳಿದ ನೀರು ಹಾಗೂ ನಿರ್ಮಾಲ್ಯ ಪುಷ್ಪವು ಯಾರೂ ಮೆಟ್ಟದ ಸ್ಥಳದಲ್ಲಿ, ಎಂಜಲು ಮತ್ತು

ಹೊಲಸು-ಇಲ್ಲದಿರುವ ಸ್ಥಳಕ್ಕೆ ಹೋಗಬೇಕು. ಅಮೃತದಂತೆ ಇರುವ ಪಂಚ (ಐದು) ವಸ್ತುಗಳು ಹಾಲು, ಮೊಸರು, ತುಪ್ಪ, ಜೇನು, ಹಾಗೂ ಸಕ್ಕರೆ- ಇವುಗಳಿಂದ ಅಭಿಷೇಕವು ಸಕಲದೇವತೆಗಳಿಗೂ ಅತಿಮುಖ್ಯವಾದುದು.

ನೀರಾಜನ

ಆರತಿಯನ್ನು ಮೊದಲು ದೇವರ ಪಾದಕ್ಕೆ ಮೂರುಬಾರಿ, ಹೃದಯಕ್ಕೆ ಮೂರುಬಾರಿ, ನಂತರ ಶಿರಸ್ಸಿಗೆ ಮೂರುಬಾರಿ ಎತ್ತಿ, ಕೊನೆಗೆ ಇಡೀಶರೀರಕ್ಕೆ ಮೂರಾವರ್ತಿ ಎತ್ತಬೇಕು. ಆರತಿಯನ್ನು ನಿಂತು ನೋಡುವುದು ಉತ್ತಮ, ಆರತಿಯ ಮೂಲಕ ಜ್ಯೋತಿಃ ಸ್ವರೂಪನಾದ ಪರಮಾತ್ಮನನ್ನು ತನ್ನ ನಯನದ್ವಯಗಳಲ್ಲಿ ಹಾಗೂ ಜೀವ ಪ್ರವೇಶಮಾಡಿದ ನಡುನೆತ್ತಿಯಲ್ಲಿಯೂ ಧರಿಸಿದಂತೆ ಭಾವಿಸಬೇಕು.

ಪ್ರದಕ್ಷಿಣೆ-ನಮಸ್ಕಾರ

ಇದಕ್ಕೆ ಒಂದು ಕ್ರಮವಿದೆ. ಗಣಪತಿಗೆ ಒಂದು, ಸೂರ್ಯನಿಗೆ ಎರಡು, ಶಿವನಿಗೆ ಮೂರು. ವಿಷ್ಣು ಮತ್ತು ದೇವಿಯರಿಗೆ ನಾಲ್ಕು ಸುತ್ತು ಪ್ರದಕ್ಷಿಣೆ ಬಂದು ನಮಸ್ಕರಿಸಬೇಕು. ಆಗ ನನಗೆ ಯಾರೂ ರಕ್ಷಕರಿಲ್ಲ. ನಿನಗೆ ಶರಣ ನಾಗಿದ್ದೇನೆ. ನನ್ನ ಸಕಲ ಜನ್ಮದ ಪಾಪಗಳನ್ನು ಕೊನೆಗೊಳಿಸು ಎಂದು ಹೇಳಿ ಸಾಷ್ಟಾಂಗ ನಮಸ್ಕಾರಮಾಡುವುದು.

ಪ್ರಸಾದ ಸ್ವೀಕಾರ

ಆಯಾ ದೇವತೆಗಳ ನಿರ್ಮಾಲ್ಯ ದೇವತೆಗಳ ಹೆಸರನ್ನು ಹೇಳಿ ಅವರಿಗೆ ಮೊದಲು ಸ್ವಾಮಿಯ ಪ್ರಸಾದವನ್ನಿತ್ತು ಕೊನೆಗೆ ತಾನು ಸ್ವಾಮಿಯ ಪ್ರಸಾದ ವನ್ನು ತೆಗೆದುಕೊಳ್ಳಬೇಕು. ವಿಷ್ಣುವಿನ ಶಿರಸ್ಸಿನಲ್ಲಿದ್ದ ಪುಷ್ಪವನ್ನು ತನ್ನ ಶಿರಸ್ಸಿನಲ್ಲಿ ಧರಿಸಬಾರದು. ಶಂಖೋದಕವನ್ನು ಶಿರಸ್ಸಿನಲ್ಲಿ ಧರಿಸಿ ನಂತರ ದೇವರ ತೀರ್ಥವನ್ನು ಕುಡಿಯಬೇಕು. ಪಾತ್ರಾಂತರದಿಂದ ತೀರ್ಥಸ್ವೀಕಾರವು ಅತ್ಯುತ್ತಮವು.

shrimadhvamuda@gmail.com

ಪೂಜೆಯ ಸಲಕರಣೆಗಳು

(ಕಬ್ಬಿಣವಲ್ಲದ) ಪಂಚಪಾತ್ರೆ, ಉದ್ಧರಣೆ, ತಟ್ಟೆ, (ಹರಿವಾಣ), ಗಂಟೆ, ಆರತಿ, ಚಿಕ್ಕ ದೀಪಸ್ತಂಭಗಳೆರಡು, ಸಾಣೆಕಲ್ಲು, ಕೊರಡು, ಅಗರಬತ್ತಿ (ಅದನ್ನು ಇಡುವ ಸಾಧನ) ಆಸನ, ಮಂತ್ರಾಕ್ಷತೆ, ಆರತಿಯತಟ್ಟೆ, ಅರಿಶಿನ, ಕುಂಕುಮ, ಶುದ್ಧಜಲ, ಪಂಚಾಮೃತ ಸಾಹಿತ್ಯಗಳು, ಕಲಶಪಾತ್ರೆ, ಅಭಿಷೇಕ ಶಂಖ, ಪುಷ್ಪಗಳು, ಜಾಗಟೆ, ತಾಳ, ಊದುವ ಶಂಖ ಮುಂತಾದವುಗಳು.

ಇವುಗಳು ಎಲ್ಲವೂ ಪೂಜಾ ವಿಧಾನದ ಕೇವಲ ಕೆಲವು ವಿಚಾರಗಳು. ಇವನ್ನು ತಿಳಿಸುವ ಸಲುವಾಗಿಯೇ 'ಪ್ರಪಂಚ ಸಾರ' ಮುಂತಾದ ಅನೇಕ ತಾಂತ್ರಿಕ ಗ್ರಂಥಗಳಿವೆ. ಸ್ವಲ್ಪಾಂಶವನ್ನಾದರೂ ಭಕ್ತರು ತಿಳಿಯಲಿ—ಎಂಬ ಭಾವನೆಯಿಂದ ಕೆಲವು ಮುಖ್ಯ ವಿಷಯಗಳ ವಿವರಣೆಯನ್ನು ಕೊಟ್ಟಿರುವೆನು. ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿಯಬೇಕೆಂದು ಅಪೇಕ್ಷಿಸುವಲ್ಲಿ ರಾಗಿಗುಡ್ಡದಲ್ಲಿ ಯಾವಾಗಲೂ ತಾವು ಮುಖತಃ ಸಾಧಾರ ಗ್ರಂಥಗಳಿಂದ ನನ್ನಿಂದ ತಿಳಿಯಬಹುದು.

ದಾನಿಗಳಿಗೊಂದು ಸದವಕಾಶ

ನಾವು ಈ ಲೋಕದಲ್ಲಿ ದುಡಿದ ಲೌಕಿಕ ವಸ್ತುಗಳೆಲ್ಲವನ್ನೂ ಇಲ್ಲಿಯೇ ಬಿಟ್ಟು ಹೋಗುವೆವು. ನಾವು ಸಂಪಾದಿಸಿದ **'ಜ್ಞಾನ'** ಮಾತ್ರ ನಮ್ಮೊಡನೆ ಬರುವುದು. ಆದುದರಿಂದ ಇಂತಹ **'ಜ್ಞಾನಯಜ್ಞ'**ಕ್ಕೆ ಸಹಾಯಮಾಡುವ ಜನರು 1,000 ರೂಪಾಯಿಗಳನ್ನು ದಾನಮಾಡುವಲ್ಲಿ ಅವರ ಹೆಸರಿನಲ್ಲಿ ಮುದ್ರಿಸಿದ 1,000 ಪ್ರತಿಗಳನ್ನು ಭಕ್ತರಿಗೆ ಉಚಿತವಾಗಿ ಹಂಚಲಾಗುವುದು. ಸಾರ್ವಜನಿಕರ ಸರ್ವತೋಮುಖವಾದ ಏಳಿಗೆಯನ್ನು ಸತತವಾಗಿ ಬಯಸುವ ರಾಗಿಗುಡ್ಡದ ಭಕ್ತಮಂಡಳಿಗೆ ನನ್ನ ಹಾರ್ದಿಕ ಧನ್ಯವಾದಗಳು.

ಇಂತು ಭಕ್ತಮಂಡಲಿಯ ಅನುಚರನಾದ,

ಆಗಮಿಕ ಕೆ. ಗಣಪತಿ ಸೋಮಯಾಜೀ

(ಶಿರೋಮಣಿ, ವಿದ್ವಾನ್, ವಿಶಾರದ, ರತ್ನ)

ಸಂಕ್ಷಿಪ್ತ ಪೂಜಾಪದ್ಧತಿ

ಶ್ರೀ ಗಣೇಶಾಯನಮಃ । ಶ್ರೀ ಶಾರದಾಸರಸ್ವತ್ಯೈನಮಃ ।
ಶ್ರೀ ಪ್ರಸನ್ನಾಂಜನೇಯಸ್ವಾಮಿನೇನಮಃ ॥

(ಪೂಜಿಸಲು ಬಯಸುವ ಪ್ರತಿಯೊಬ್ಬರೂ ಸ್ನಾನಮಾಡಿ, ಶುಭ್ರ ವಸ್ತ್ರವನ್ನು ಧರಿಸಿ, ಹಣೆಯಲ್ಲಿ ದೇವರ ಕುಂಕುಮ ಪ್ರಸಾದವನ್ನು ಧರಿಸಿ, ಗುರು-ಹಿರಿಯರಿಗೆ ವಂದಿಸಿ, ತಮ್ಮ ಆಸನದಲ್ಲಿ ಕುಳಿತು ದೇಹಶುದ್ಧಿಗಾಗಿ ಆಚಮನಮಾಡಬೇಕು.)

ಆಚಮನ

ಕೇಶವಾಯಸ್ವಾಹಾ ।
ನಾರಾಯಣಾಯಸ್ವಾಹಾ ।
ಮಾಧವಾಯಸ್ವಾಹಾ ॥

ಎಂದು ಮೂರುಬಾರಿ ನೀರನ್ನು ಕುಡಿದು, ನಂತರ ಗೋವಿಂದಾಯ ನಮಃ, ವಿಷ್ಣವೇನಮಃ, ಮಧುಸೂದನಾಯನಮಃ, ತ್ರಿವಿಕ್ರಮಾಯನಮಃ, ವಾಮನಾಯನಮಃ, ಶ್ರೀಧರಾಯನಮಃ, ಹೃಷೀಕೇಶಾಯನಮಃ, ಪದ್ಮನಾಭಾಯನಮಃ, ದಾಮೋದರಾಯನಮಃ, ಶ್ರೀ ಮಹಾವಿಷ್ಣವೇನಮಃ, —ಎಂದು ಮಹಾವಿಷ್ಣುವಿನ ಸ್ಮರಣೆಮಾಡುವುದು.

ಘಂಟಾನಾದ

ಆಗಮಾರ್ಥಂತು ದೇವಾನಾಂ ಗಮನಾರ್ಥಂತು ರಕ್ಷಸಾಂ ।
ಕುರ್ವೇ ಘಂಟಾರವಂ ತತ್ರ ದೇವತಾಹ್ವಾನ ಲಕ್ಷಣಂ ॥

(ಪೂಜಾವಿಘಾತಕರ, ದೂರಗಮನ, ಹಾಗೂ ದೇವತೆಗಳ ಆಗಮನಕ್ಕಾಗಿ ಮೂವತ್ತೆರಡು ಬಾರಿ ಘಂಟೆಯನ್ನು ಬಾರಿಸುವುದು.)

ಆಸನಶುದ್ಧಿ

ಅಪಕ್ರಾಮಂತು ಭೂತಾದ್ಯಾಃ ಸರ್ವೇತೇ ಭೂಮಿಭಾರಕಾಃ ।
ಸರ್ವೇಷಾಮವಿರೋಧೇನ ಪೂಜಾಕರ್ಮಸಮಾರಭೇ ॥

(ಪೂಜೆಗೆ ತೊಂದರೆಯನ್ನು ಉಂಟುಮಾಡುವ ಸಕಲರೂ ದೂರ ಸರಿಯಲಿ. ನಾನು ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಪೂಜಿಸುವೆನು.)

ಸಂಕಲ್ಪ

ಅಸ್ಮಿನ್ ಭಾರ್ಗವವಾಸರೆ, ಶುಭತಿಥೌ, ಶುಭ ನಕ್ಷತ್ರೇ, ಶ್ರೀ ಪ್ರಸನ್ನಾಂಜನೇಯಸ್ವಾಮಿ ದಿವ್ಯ ಕ್ಷೇತ್ರೇ ನಾಮ (ಹೆಸರನ್ನು ಹೇಳಿ) ನಾಮ್ನ್ಯಾಃ ಸಮಸ್ತ ಗ್ರಹಚಾರ ಪೀಡಾ ಪರಿಹಾರ ದ್ವಾರಾ, ಸಮಸ್ತ ಜನ್ಮಸು ಅಖಂಡಿತ ಸೌಮಂಗಲ್ಯಾಭಿವೃದ್ಧ್ಯರ್ಥಂ, ಮನುಷ್ಯಜನ್ಮಸಾರ್ಥಕತಾ ಸಿದ್ಧ್ಯರ್ಥಂ (ಅವಿವಾಹಿತ ಕನ್ಯೆಯರು–ಹೆಸರನ್ನು ಹೇಳಿ) ನಾಮ್ನ್ಯಾಃ ವಿದ್ಯಾ–ವಯೋ–ಧಿಕಾರ-ರೂಪಾ-ನುರೂಪ ವರ ಪ್ರಾಪ್ತ್ಯರ್ಥಂ) ಶ್ರೀ ಜಗದಂಬಾಪ್ರೀತ್ಯರ್ಥಂ ಲಲಿತಾಸಹಸ್ರನಾಮ ಪೂರ್ವಕ ಸೌಭಾಗ್ಯಸುಮಂಗಲೀ ಕುಂಕುಮಾರ್ಚನಂ ಕರಿಷ್ಯೇ—ಎಂದು ಸಂಕಲ್ಪಮಾಡಿ. ಪಂಚಪಾತ್ರೆಗೆ ಪುಷ್ಪಾಕ್ಷತೆಯನ್ನು ಹಾಕಿ

ಕಲಶಪೂಜಾ

ಗಂಗೇಚ ಯಮುನೇಚೈವ ಗೋದಾವರಿ ಸರಸ್ವತಿ ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು—ಎಂದು ಹೇಳಿ ಕೈಮುಗಿಯುವುದು (ಕಲಶೋದಕದಿಂದ ಪೂಜಾದ್ರವ್ಯಗಳನ್ನು ಪ್ರೋಕ್ಷಿಸಿ.)

ಗಣಪತಿಪೂಜಾ

ಪೂಜಾಯಾಃ ನಿರ್ವಿಘ್ನತಾ ಸಿದ್ಧ್ಯರ್ಥಂ ಆದೌ ಗುರು ಗಣಪತಿ ಪೂಜನಂ ಕರಿಷ್ಯೇ—ಎಂದು ಸಂಕಲ್ಪಿಸಿ (ಬೆಳ್ಳಿಯ ವಿಗ್ರಹ, ಹರಿದ್ರಾಖಂಡ,

ಕ್ರಮುಕ ಖಂಡ, ಗೋಮಯ ಬಿಂಬ, ಅಕ್ಷತಾ ಪುಂಜ—ಮುಂತಾದ ಅವರವರ ಮನೆಯ ಆಚರಣೆಯಲ್ಲಿ ಪರಂಪರೆಯಿಂದ ಬಂದ ಕ್ರಮದಲ್ಲಿ ಗಣಪತಿ ಪೂಜೆಯನ್ನು ಮಾಡುವುದು.)

ಧ್ಯಾನಂ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪ ಶಾಂತಯೇ ॥
(ಪ್ರಸನ್ನ ವದನ = ಗಜಾನನ ಎಂದರ್ಥವು)
ಗಣೇಶಾಯನಮಃ ಧ್ಯಾನಂ ಸಮರ್ಪಯಾಮಿ

(ಸಮರ್ಪಯಾಮಿ-ಎಂದು ಪ್ರತಿಯೊಂದು ಉಪಚಾರಕ್ಕೂ ಪುಷ್ಪಾಕ್ಷತೆಯನ್ನು ಸಮರ್ಪಿಸುವುದು).

ಆವಾಹನಂ

ವಿಘ್ನರಾಜ ನಮಸ್ತುಭ್ಯಂ ಆಗಚ್ಛ ಗಿರಿಜಾತ್ಮಜ ।
ಇಮಾಂ ಮಯಾ ಕೃತಾಂ ಪೂಜಾಂ ಗೃಹಾಣಸುರಸತ್ತಮ ॥
ಗಣೇಶಾಯನಮಃ ಆವಾಹನಂ ಸಮರ್ಪಯಾಮಿ

ಆಸನಂ

ಅನೇಕರತ್ನಂಸಂಯುಕ್ತಂ ಮುಕ್ತಾಹಾರೈರ್ವಿಭೂಷಿತಂ ।
ಸ್ವರ್ಣಸಿಂಹಾಸನಂ ದೇವ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥
ಗಣೇಶಾಯನಮಃ ಸುವರ್ಣಸಿಂಹಾಸನಂ ಸಮರ್ಪಯಾಮಿ

ಪಾದ್ಯಂ

ಉಮಾಸುತ ನಮಸ್ತೇಽಸ್ತು ಶಂಕರಪ್ರಿಯ ಸಿದ್ಧಿದ ।
ಭಕ್ತ್ಯಾ ಪಾದ್ಯಂ ಮಯಾ ದತ್ತಂ ಸ್ವೀಕುರು ಪ್ರಣತಪ್ರಿಯ ॥
ಗಣೇಶಾಯನಮಃ ಪಾದ್ಯಂ ಸಮರ್ಪಯಾಮಿ

shrinahudupa@gmail.com

(ಪಾದ್ಯ-ಅರ್ಘ್ಯ-ಆಚಮನ-ಸ್ನಾನ-ಈ ನಾಲ್ಕು ಉಪಚಾರಗಳಿಗೆ ಪುಷ್ಪಾಕ್ಷತೆಯನ್ನು ದೇವರಿಗೆ ಅರ್ಪಿಸಿದ ಮೇಲೆ, ಅರ್ಘ್ಯಪಾತ್ರೆಗೆ ಒಂದು ಉದ್ಧರಣೆ ನೀರನ್ನು ಬಿಡಬೇಕು.)

ಅರ್ಘ್ಯಂ

ಪೂಜಾರ್ಥಂ ತವ ವಿಘ್ನೇಶ ಗಂಧಪುಷ್ಪಾಕ್ಷತೈರ್ಯುತಂ ।
ಗೃಹಾಣಾರ್ಘ್ಯಂ ಮಯಾದತ್ತಂ ಸರ್ವಸಿದ್ಧಿಂ ಪ್ರಯಚ್ಛ ಮೇ ॥
ಗಣೇಶಾಯನಮಃ ಅರ್ಘ್ಯಂ ಸಮರ್ಪಯಾಮಿ

ಆಚಮನೀಯಂ

ಗಂಗಾಜಲಂ ಸಮಾನೀತಂ ಸುವರ್ಣಕಲಶೇಸ್ಥಿತಂ ।
ಇದ ಮಾಚಮನಂ ದೇವ ಗೃಹಾಣ ಗಣನಾಯಕ ॥
ಗಣೇಶಾಯನಮಃ ಆಚಮನೀಯಂ ಆಚಮನಂ ಸಮರ್ಪಯಾಮಿ

ಮಧುಪರ್ಕಂ

ದಧಿ ಕ್ಷೌದ್ರಂ ಘೃತಂ ಶುದ್ಧಂ ಕಪಿಲಾಯಾಃ ಸುಗಂಧಿಯತ್ ।
ಸುಸ್ವಾದು ಮಧುರಂ ದೇವ ಮಧುಪರ್ಕಂ ಗೃಹಾಣ ಮೇ ॥
ಗಣೇಶಾಯನಮಃ ಮಧುಪರ್ಕಂ ಸಮರ್ಪಯಾಮಿ

ಸ್ನಾನಂ

ಸರ್ವತೀರ್ಥಾಹೃತಂ ತೋಯಂ ಮಯಾಪ್ರಾರ್ಥನಯಾ ವಿಭೋ ।
ಸುವಾಸಿತಂ ಗೃಹಾಣೇದಂ ಸಮ್ಯಕ್‌ಸ್ನಾತುಂ ಗಣಾಧಿಪ ॥
ಗಣೇಶಾಯನಮಃ ಶುದ್ಧೋದಕಸ್ನಾನಂ ಸಮರ್ಪಯಾಮಿ

ವಸ್ತ್ರಂ

ತಪ್ತಕಾಂಚನವರ್ಣಾಭಂ ಪಟ್ಟೋರ್ಣಂ ಮೃದುಲಂ ಶುಭಂ ।
ವಸ್ತ್ರಯುಗ್ಮಂ ಗೃಹಾಣೇದಂ ಗಣಾಧ್ಯಕ್ಷ ಜಗತ್‌ಪ್ರಭೋ ॥

shrinath.udupa@gmail.com

ಗಣೇಶಾಯನಮಃ ವಸ್ತ್ರಂ ಉಪವಸ್ತ್ರಂ ಚ ಸಮರ್ಪಯಾಮಿ
(ಗೆಜ್ಜೆವಸ್ತ್ರವನ್ನು ದೇವರಿಗೆ ಹೊದಿಸುವುದು).

ಉಪವೀತಂ

ಬ್ರಹ್ಮವಿಷ್ಣುಮಹೇಶೈಶ್ಚ ನಿರ್ಮಿತಂ ಬ್ರಹ್ಮಸೂತ್ರಕಂ ।
ಯಜ್ಞೋಪವೀತೇನಾನೇನ ಪ್ರೀಯತಾಂ ಗಣನಾಯಕಃ ॥
ಗಣೇಶಾಯ ನಮಃ ಉಪವೀತಂ ಸಮರ್ಪಯಾಮಿ

ಆಭರಣಂ

ವೈಡೂರ್ಯಂ ಕಂಕಣಂ ದಿವ್ಯಂ ಅಂಗುಲೀಯಂ ಚ ಕುಂಡಲೇ ।
ಭೂಷಣಾನಿ ಮಯಾದತ್ತಂ ಗೃಹಾಣ ಗಣನಾಯಕ ॥
ಗಣೇಶಾಯ ನಮಃ ಆಭರಣಂ ಸಮರ್ಪಯಾಮಿ

ಗಂಧಃ

ಶ್ರೀಖಂಡಂ ಚಂದನಂ ದಿವ್ಯಂ ಗಂಧಾಢ್ಯಂ ಸುಮನೋಹರಂ ।
ವಿಲೇಪನಂ ಸುರಶ್ರೇಷ್ಠ ಚಂದನಂ ಪ್ರತಿಗೃಹ್ಯತಾಂ ॥
ಗಣೇಶಾಯ ನಮಃ ದಿವ್ಯ-ಪರಿಮಳ-ಗಂಧಾನ್-ಧಾರಯಾಮಿ

ಅಕ್ಷತಾಃ

ಅಕ್ಷತಾಶ್ಚ ಸುರಶ್ರೇಷ್ಠ ಕುಂಕುಮಾಕ್ತಾಃ ಸುಶೋಭಿತಾಃ ।
ಪೂಜಾ ಸಂರಕ್ಷಣಾರ್ಥಾಯ ಈಶ್ವರ ಪ್ರತಿಗೃಹ್ಯತಾಂ ॥
ಗಣೇಶಾಯ ನಮಃ ಅಕ್ಷತಾನ್ ಸಮರ್ಪಯಾಮಿ

ಪುಷ್ಪಾಣಿ

ಕರವೀರೈರ್ಜಾತಿ ಕುಸುಮೈಃ ಮಂದಾರೈರ್ಬಕುಳೈಃ ಶುಭೈಃ ।
ಶತಪತ್ರೈಶ್ಚ ಕಲ್ಹಾರೈ ರರ್ಚಯೇ ಗಣನಾಯಕಂ ॥
ಗಣಪತಯೇ ನಮಃ ನಾನಾವಿಧಪುಷ್ಪೈಃ ಪೂಜಯಾಮಿ

shrinathudupa@gmail.com

ದ್ವಾದಶನಾಮ

ಸುಮುಖಾಯಾ ನಮಃ, ಏಕದಂತಾಯ ನಮಃ, ಕಪಿಲಾಯ ನಮಃ, ಗಜಕರ್ಣಕಾಯ ನಮಃ, ಲಂಬೋದರಾಯ ನಮಃ, ವಿಕಟಾಯ ನಮಃ, ವಿಘ್ನರಾಜಾಯ ನಮಃ, ಗಣಾಧಿಪಾಯ ನಮಃ, ಧೂಮ್ರಕೇತವೇ ನಮಃ, ಗಣಾಧ್ಯಕ್ಷಾಯ ನಮಃ, ಫಾಲಚಂದ್ರಾಯ ನಮಃ, ಗಜಾನನಾಯ ನಮಃ—ಗಣಪತಯೇ ನಮಃ, ನಾಮ ಪೂಜಾಂ ಸಮರ್ಪಯಾಮಿ.

ಧೂಪಃ

ವನಸ್ಪತಿ ರಸೋತ್ಪನ್ನೋ ಗಂಧಾಢ್ಯೋ ಗಂಧ ಉತ್ತಮಃ ।
ಆಘ್ರೇಯಃ ಸರ್ವದೇವಾನಾಂ ಧೂಪೋಽಯಂ ಪ್ರತಿಗೃಹ್ಯತಾಂ ॥
ಗಣಪತಯೇ ನಮಃ ಧೂಪಮಾಘ್ರಾಪಯಾಮಿ

ದೀಪಃ

ಜಸ್ಯಾಂ ಚ ವರ್ತಿಸಂಯುಕ್ತಂ ವಹ್ನಿನಾಯೋಜಿತಂ ಮಯಾ
ದೀಪಂ ಗೃಹಾಣ ದೇವೇಶ ತ್ರೈಲೋಕ್ಯತಿಮಿರಾಪಹ ॥
ಗಣಪತಯೇ ನಮಃ ದೀಪಂ ದರ್ಶಯಾಮಿ

ನೈವೇದ್ಯಂ

ಫಲಾನೀ ಮಾನಿರಮ್ಯಾಣಿ ಸ್ಥಾಪಿತಾನಿ ತವಾಗ್ರತಃ
ತೇನ ಮೇ ಸುಫಲಾವಾಪ್ತಿರ್ಭವೇಜ್ಜನ್ಮನಿ ಜನ್ಮನಿ ॥

(ನೀರಿನಿಂದ ಕೂಡಿದ ಪುಷ್ಪದಿಂದ ಪ್ರೋಕ್ಷಿಸಿ, ನೈವೇದ್ಯವಸ್ತುವನ್ನು ಸ್ವಾಮಿಗೆ ಸಮರ್ಪಿಸುವುದು).

ಗಣಪತಯೇ ನಮಃ ನಾನಾವಿಧ ಫಲಾನಿ ಸಮರ್ಪಯಾಮಿ

ತಾಂಬೂಲಂ

ಪೂಗೀಫಲಂ ಮಹದ್ದಿವ್ಯಂ ನಾಗವಲ್ಲೀ ದಲೈರ್ಯುತಂ ।
ಕರ್ಪೂರೈಲಾ ಸಮಾಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಂ ॥
ಗಣಪತಯೇ ನಮಃ ಮುಖವಾಸನಾರ್ಥಂ ತಾಂಬೂಲಂ ಸಮರ್ಪಯಾಮಿ

shrinath.udupa@gmail.com

ನೀರಾಜನಂ

ಚಂದ್ರಾದಿತ್ಯೌ ಚ ಧರಣಿರ್ವಿದ್ಯುದಗ್ನಿಸ್ತಥೈವ ಚ ।
ತ್ವಮೇವ ಸರ್ವಜ್ಯೋತೀಂಷಿಹ್ಯಾರ್ತಿಕ್ಯಂ ಪ್ರತಿಗೃಹ್ಯತಾಂ ॥
ಗಣಪತಯೇ ನಮಃ ಮಹಾನೀರಾಜನಂ ಸಮರ್ಪಯಾಮಿ

(ನೀರಾಜನಾನಂತರಂ ಆಚಮನಂ. ಆಚಮನಾನಂತರಂ ಪುಷ್ಪಾಕ್ಷತಾನ್ ಸಮರ್ಪಯಾಮಿ).

ಪುಷ್ಪಾಂಜಲಿಃ

ನಾನಾಮಂತ್ರಾನ್ ಸಮುಚ್ಚಾರ್ಯ ಯಥಾಶಕ್ತ್ಯಾ ಮಯಾರ್ಪಿತಂ ।
ಪುಷ್ಪಾಂಜಲಿಂ ಗೃಹಾಣೇಮಂ ಹೇರಂಬ ಗಣನಾಯಕ ॥
ಗಣಪತಯೇ ನಮಃ ಪುಷ್ಪಾಂಜಲಿಂ ಸಮರ್ಪಯಾಮಿ

ನಮಸ್ಕಾರಾಃ

ನಮಸ್ಕರೋಮಿ ದೇವೇಶ ಭಕ್ತಾನಾಮಭಯಪ್ರದ ।
ವಿಘ್ನಾನಾಂ ನಾಶಕರ್ತಾಚ ಹರಾತ್ಮಜ ನಮೋಸ್ತುತೇ ॥
ಗಣಪತಯೇ ನಮಃ ನಮಸ್ಕಾರಾನ್ ಸಮರ್ಪಯಾಮಿ

ಪ್ರಸನ್ನಾರ್ಘ್ಯಂ

ಲಂಬೋದರ ನಮಸ್ತುಭ್ಯಂ ಸತತಂ ಮೋದಕಪ್ರಿಯ ।
ಗೃಹಾಣಾರ್ಘ್ಯಂ ಮಯಾದತ್ತಂ ಸಂಕಟಾನ್ಮಾಂ ನಿವಾರಯ ॥

(ಬಲಗೈಯಲ್ಲಿ ಪುಷ್ಪವನ್ನಿಟ್ಟುಕೊಂಡು, ಎಡಗೈಯಿಂದ ನೀರನ್ನು ಮೂರುಬಾರಿ ಬಿಡುವುದು).

ಗಣಪತೆಯೇ ನಮಃ ಪ್ರಸನ್ನಾರ್ಘ್ಯಂ ಸಮರ್ಪಯಾಮಿ

shrinathudupa@gmail.com

ಪ್ರಾರ್ಥನಾ

ವಿಘ್ನಾವಿನಾಶ ಮಾಯಾಂತು ಸರ್ವೇಶ ಸುರಪೂಜಿತ ।
ಕಾರ್ಯಂ ಮೇ ಸಿದ್ಧಿಮಾಯಾತು ಪೂಜಾನಾಥ ವಿನಾಯಕ ॥

ರೋಗ–ಪಾತಕ–ದೌರ್ಭಾಗ್ಯ–ದಾರಿದ್ರ್ಯ–ವಿನಿವೃತ್ತಯೇ ।
ಅಶೇಷಾಘ ವಿನಾಶಾಯ ಪ್ರಸೀದ ಗಣನಾಯಕ ॥

ಪೂಜಾಸಮರ್ಪಣಂ

ಅಜ್ಞಾನಿನಾ ಮಯಾ ದೇವ ವ್ರತ ಮೇತತ್ ಸುದುರ್ಲಭಂ ।
ಕೃತಂ ಭವತು ಮೇ ದೇವ ಅರ್ಪಯಾಮಿ ದಯಾನಿಧೇ ॥
ಗಣಪತಯೇ ನಮಃ ಪೂಜಾಂ ಸಮರ್ಪಯಾಮಿ

ಪ್ರಸಾದ ಸ್ವೀಕಾರ

(ದೇವರಿಗೆ ಸಮರ್ಪಿಸಿದ ಒಂದು ಹೂವನ್ನು ಕೈಯಲ್ಲಿ ಹಿಡಿದುಕೊಂಡು ಘಂಟಾಕರ್ಣಾದಯಃ ಗಣಪತೇಃ ಪ್ರಸಾದಂ ಪತಿಗೃಹ್ಣಂತು–ಎಂದು ಹೇಳಿ ನೆಲಕ್ಕೆ ಹಾಕಿ. ಮತ್ತೊಮ್ಮೆ ಕೈಯನ್ನು ತೊಳೆದುಕೊಂಡು, ಬೇರೆ ಒಂದು ಪುಷ್ಪವನ್ನು ಸ್ವಾಮಿಯಿಂದ ಸ್ವೀಕರಿಸಿ) :

ಬಹುಜನ್ಮಾರ್ಜಿತಂಯನ್ಮೇ ದೇಹೇಸ್ತಿದುರಿತಂ ಹಿ ಯತ್ ।
ತವಪ್ರಸಾದಾತ್ ತತ್ ಸರ್ವಂ ಲಯಂ ಯಾತು ಗಣಾಧಿಪ ॥

ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭ ।
ನಿರ್ವಿಘ್ನಂ ಕುರುಮೇದೇವ ಸರ್ವಕಾರ್ಯೇಷು ಸರ್ವದಾ
(ಎಂದು ಪ್ರಾರ್ಥಿಸಿ ಶಿರಸ್ಸಿನಲ್ಲಿ ಧರಿಸಬೇಕು).

ಅನಯಾ ಪೂಜಾಯ ಶ್ರೀ ಮಹಾಗಣೇಶ್ವರಃ ಪ್ರೀಯತಾಂ–(ಎಂದು ಹೇಳಿ ಅಕ್ಷತೆ-ಮತ್ತು ಉದಕವನ್ನು ಬಿಡಬೇಕು). ಆವಾಹಿತಂ ಶ್ರೀ ಮಹಾ ಗಣಪತಿಂ ಏತಸ್ಮಾತ್ ಬಿಂಬಾತ್ ಉದ್ವಾಸಯಾಮಿ– (ಎಂದು ಹೇಳಿ ದೇವರನ್ನು ವಿಸರ್ಜಿಸುವುದು–ಆನಂತರದಲ್ಲಿ ದೇವಿಯನ್ನು ಪೂಜಿಸುವುದು).

shrinathudupa@gmail.com

ಧ್ಯಾನಂ

1. ಸಿಂದೂರಾರುಣ ವಿಗ್ರಾಹಾಂ ತ್ರಿನಯನಾಂ ಮಾಣಿಕ್ಯ ಮೌಲಿ ಸ್ಫುರ ತ್ತಾರಾನಾಯಕ ಶೇಖರಾಂ ಸ್ಮಿತಮುಖೀ ಮಾಪೀನ ವಕ್ಷೋರುಹಾಂ ।

ಪಾಣಿಭ್ಯಾ ಮಲಿಪೂರ್ಣರತ್ನಚಷಕಂ ರಕ್ತೋತ್ಪಲಂ ಬಿಭ್ರತೀಂ ಸೌಮ್ಯಾಂ ರತ್ನಘಟಸ್ಥರಕ್ತಚರಣಾಂ ಧ್ಯಾಯೇತ್ ಪರಾಮಂಬಿಕಾಂ ॥

2. ಧ್ಯಾಯೇತ್ ಪದ್ಮಾಸನಸ್ಥಾಂ ವಿಕಸಿತವದನಾಂ ಪದ್ಮಪತ್ರಾಯ ತಾಕ್ಷೀಂ ಹೇ ಮಾ ಭಾ ಂ ಪೀತವಸ್ತ್ರಾಂಕರಕಲಿತಲಸದ್ಧೇಮಪದ್ಮಾಂ ವರಾಂಗೀಂ ॥

ಸರ್ವಾಲಂಕಾರಯುಕ್ತಾಂ ಸ ತ ತ ಮ ಭ ಯ ದಾ ಂ ಭಕ್ತನಮ್ರಾಂ ಭವಾನೀಂ ಶ್ರೀವಿದ್ಯಾಂ ಶಾಂತಮೂರ್ತಿಂ ಸಕಲಸುರನುತಾಂ ಸರ್ವಸಂಪತ್ಪ್ರದಾತ್ರೀಂ ॥

3. ಸಕುಂಕುಮ ವಿಲೇಪನಾ ಮಳಿಕ ಚುಂಬಿ ಕಸ್ತೂರಿಕಾಂ ಸಮಂದ ಹಸಿತೇ ಕ್ಷಣಾಂ ಸ ಶರ ಚಾ ಪ ಪಾಶಾಂಕುಶಾಂ ।

ಅಶೇಷಜನ ಮೋಹಿನೀಂ ಅರುಣ ಮಾಲ್ಯ ಭೂಷೋಜ್ವಲಾಂ ಜಪಾ ಕುಸುಮ ಭಾಸುರಾಂ ಜಪವಿಧೌಸ್ಮರೇದಂಬಿಕಾಂ ॥

4. ಅರುಣಾಂ ಕರುಣಾತರಂಗಿತಾಕ್ಷೀಂ ಧೃತಪಾಶಾಂಕುಶ ಪುಷ್ಪ ಬಾಣಾಚಾಪಾಂ ॥

ಅಣಿಮಾದಿಭಿ ರಾವೃತಾಂ ಮಯೂಖೈ ರಹ ಮಿತ್ಯೇವ ವಿಭಾವಯೇ ಭವಾನೀಂ ॥

5. ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ। ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತುತೇ ॥

ಶ್ರೀ ಲಲಿತಾಂಬಾಯೈ ನಮಃ ಧ್ಯಾನಂ ಸಮರ್ಪಯಾಮಿ

(ಹಿಂದೆ ತಿಳಿಸಿದಂತೆಯೇ ಪುಷ್ಪಾಕ್ಷತೆಯನ್ನು ಸಮರ್ಪಿಸುವುದು.)

shrimathudupa@gmail.com

ಆವಾಹನಂ

ವಾಕ್ ಶ್ರೀ ದುರ್ಗಾದಿರೂಪೇಣ ವಿಶ್ವಮಾವೃತ್ಯ ತಿಷ್ಠತಿ ।
ಆವಾಹಯಾಮಿ ತ್ವಾಂ ದೇವಿ ಸಮ್ಯಕ್ ಸನ್ನಿಹಿತಾ ಭವ ॥
ಶ್ರೀ ಲಲಿತಾಂಬಾಯೈ ನಮಃ ಆವಾಹನಂ ಸಮರ್ಪಯಾಮಿ

ಆಸನಂ

ಭದ್ರಕಾಳಿ ನಮಸ್ತುಭ್ಯಂ ಭಕ್ತಾನಾಮಿಷ್ಟಾರ್ಥದೇ ।
ಸ್ವರ್ಣಸಿಂಹಾಸನಂದೇವಿ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥
ಶ್ರೀ ಲಲಿತಾಂಬಾಯೈ ನಮಃ ಆಸನಂ ಸಮರ್ಪಯಾಮಿ

ಸ್ವಾಗತಂ

ಸರ್ವಸ್ವರೂಪೇ ಸರ್ವೇಶೇ ಸರ್ವಶಕ್ತಿಸಮನ್ವಿತೇ ।
ಕೃತಾಂಜಲಿಪುಟೋ ಭಕ್ತ್ಯಾ ಸ್ವಾಗತಂ ಕಲ್ಪಯಾಮ್ಯಹಂ ॥
ಶ್ರೀ ಲಲಿತಾಂಬಾಯೈ ನಮಃ ಸ್ವಾಗತಂ ಸಮರ್ಪಯಾಮಿ

ಅರ್ಘ್ಯಂ

ದೂರ್ವಾಂಕುರ ತಿಲೋಪೇತಂ ಗಂಗಾದಿ ಸರಿದುದ್ಭವಂ ।
ಅರ್ಘ್ಯಂ ಗೃಹಾಣ ದೇವೇಶಿ ಸರ್ವಮಂಗಲದಾ ಭವ ॥
ಶ್ರೀಲಲಿತಾಂಬಾಯೈ ನಮಃ ಅರ್ಘ್ಯಂ ಸಮರ್ಪಯಾಮಿ

ಪಾದ್ಯಂ

ಗಂಗಾಜಲ ಸಮಾಯುಕ್ತಂ ಸುವರ್ಣಘಟಪೂರಿತಂ ।
ಪಾದ್ಯಂ ಗೃಹಾಣ ದೇವೇಶಿ ಸುರಾಸುರಸುಪೂಜಿತೇ ॥
ಶ್ರೀ ಲಲಿತಾಂಬಾಯೈ ನಮಃ ಪಾದ್ಯಂ ಸಮರ್ಪಯಾಮಿ

shrinathudupa@gmail.com

ಆಚಮನಂ

ಮಹಾಲಕ್ಷ್ಮಿ ಮಹಾಮಾಯೇ ಮಹಾಭಯ ನಿವಾರಿಣಿ ।
ಅರ್ಘ್ಯಂ-ಪಾದ್ಯಾ-ಚಮಾನ್ ದೇವಿ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥
ಶ್ರೀಲಲಿತಾಂಬಾಯ್ಯೈ ನಮಃ ಆಚಮನೀಯ ಮಾಚನಂ
ಸಮರ್ಪಯಾಮಿ

ಪಂಚಾಮೃತ ಸ್ನಾನಂ

ಸ್ನಾನಂ ಪಂಚಾಮೃತಂ ದೇವಿ ಭದ್ರಕಾಳಿ ಜಗನ್ಮಯಿ ।
ಭಕ್ತ್ಯಾ ನಿವೇದಿತಂ ತುಭ್ಯಂ ಸ್ವೀಕುರು ಪ್ರಣತಪ್ರಿಯೇ ॥
ಶ್ರೀ ಲಲಿತಾಂಬಾಯ್ಯೈ ನಮಃ ಪಂಚಾಮೃತ ಸ್ನಾನಂ ಸಮರ್ಪಯಾಮಿ

ಶುದ್ಧೋದಕ ಸ್ನಾನಂ

ಗಂಗಾಸರಸ್ವತೀ ರೇವಾ ಪಯೋಷ್ಣೀನರ್ಮದಾ ಜಲೈಃ ।
ಸ್ನಾಪಯಾಮಿ ಮಹಾದೇವಿ ತತಃ ಶಾಂತಿಂ ಕರುಷ್ವಮೇ ॥
ಶ್ರೀ ಲಲಿತಾಂಬಾಯ್ಯೈ ನಮಃ ಶುದ್ಧೋದಕ ಸ್ನಾನಂ ಸಮರ್ಪಯಾಮಿ
ಸ್ನಾನಾಂಗಂ ಆಚಮನಂ ಸಮರ್ಪಯಾಮಿ

ವಸ್ತ್ರಂ

ವಸ್ತ್ರಂ ಗೃಹಾಣ ದೇವೇಶಿ ದೇವಾಂಗ ಸದೃಶಂ ನವಂ ।
ವಿಶ್ವೇಶ್ವರಿ ಮಹಾಮಾಯೇ ನಾರಾಯಣಿ ನಮೋಸ್ತುತೇ ॥
ಶ್ರೀ ಲಲಿತಾಂಬಾಯ್ಯೈ ನಮಃ ವಸ್ತ್ರಂ ಸಮರ್ಪಯಯಮಿ

ಕಂಚುಕಂ

ಗೋದಾವರಿ ನಮಸ್ತುಭ್ಯಂ ಸರ್ವಾಭೀಷ್ಟ ಪ್ರದಾಯಿನಿ ।
ಸರ್ವಲಕ್ಷಣ ಸಂಭೂತೇ ದುರ್ಗೇದೇವಿ ನಮೋಸ್ತುತೇ ॥
ಶ್ರೀ ಲಲಿತಾಂಬಾಯ್ಯೈ ನಮಃ ಕಂಚುಕಂ ಸಮರ್ಪಯಾಮಿ

shrinidhidupa@gmail.com

ಉಪವೀತಂ

ತಕ್ಷಕಾನಂತ ಕರ್ಕೋಟ ನಾಗಯಜ್ಞೋಪವೀತಿನಿ ॥
ಸೌವರ್ಣಂ ಯಜ್ಞಸೂತ್ರಂ ತೇದದಾಮಿ ಹರಿವಾಸಿನಿ ।
ಶ್ರೀ ಲಲಿತಾಂಬಾಯೈ ನಮಃ ಉಪವೀತಂ ಸಮರ್ಪಯಾಮಿ

ಆಭರಣಂ

ನಾನಾರತ್ನವಿಚಿತ್ರಾಢ್ಯಾನ್ ವಲಯಾನ್ ಸುಮನೋಹರಾನ್ ।
ಅಲಂಕಾರಾನ್ ಗೃಹಾಣಾತ್ವನ್ಮಮಾಭೀಷ್ಟ ಪ್ರದಾಭವ ॥
ಶ್ರೀ ಲಲಿತಾಂಬಾಯೈ ನಮಃ ಆಭರಣಂ ಸಮರ್ಪಯಾಮಿ

ಗಂಧಃ

ಗಂಧಂ ಚಂದನಸಂಯುಕ್ತಂ ಕುಂಕುಮಾದಿ ವಿಮಿಶ್ರಿತಂ ।
ಗೃಹ್ಣೀಷ್ವ ದೇವದೇವೇಶಿ ಸರ್ವಮಂಗಲದಾ ಭವ ॥
ಶ್ರೀ ಲಲಿತಾಂಬಾಯೈ ನಮಃ ನಾನಾವಿಧ ಗಂಧಾನ್ ಧಾರಯಾಮಿ

ಬಿಲ್ವವೃಕ್ಷ ಕೃತಾವಾಸೇ ಬಿಲ್ವಪತ್ರಪ್ರಿಯೇ ಶುಭೇ ।
ಬಿಲ್ವಗಂಧಂ ಪ್ರಯಚ್ಛಾಮಿ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥
ಶ್ರೀ ಲಲಿತಾಂಬಾಯೈ ನಮಃ ಬಿಲ್ವಗಂಧಂ ಸಮರ್ಪಯಾಮಿ

ಅಕ್ಷತಾಃ

ಅಕ್ಷತಾನ್ ಶುಭದಾನ್ ದೇವಿ ಹರಿದ್ರಾಚೂರ್ಣ ಮಿಶ್ರಿತಾನ್ ।
ಪ್ರತೀಗೃಹ್ಣೀಷ್ವ ದೇವೇಶಿ ದುರ್ಗೇದೇವಿ ನಮೋಸ್ತುತೇ ॥
ಶ್ರೀ ಲಲಿತಾಂಬಾಯೈ ನಮಃ ಹರಿದ್ರಾಕ್ಷತಾನ್ ಸಮರ್ಪಯಾಮಿ

shrinath.bdupa@gmail.com

ಪುಷ್ಪಂ

ಮಾಲತೀ ಬಿಲ್ವಮಂದಾರ ಕುಂದಜಾತಿವಿಮಿಶ್ರಿತಂ ।
ಪುಷ್ಪಂ ಗೃಹಾಣಾ ದೇವೇಶಿ ದುರ್ಗೆದೇವಿ ನಮೋಸ್ತುತೇ ॥
ಶಿವಪತ್ನಿ ಶಿವೇದೇವಿ ಶಿವಭಕ್ತಪ್ರಿಯೇ ಂಭೇ ।
ದ್ರೋಣಪುಷ್ಪಂ ಮಯಾದತ್ತಂ ಗೃಹಾಣ ಶಿವದಾ ಭವ ॥
ಶ್ರೀಲಲಿತಾಂಬಾಯ್ಯೈ ನಮಃ ಪುಷ್ಪಾಣಿ ಸಮರ್ಪಯಾಮಿ

ಮಂಗಲ ದ್ರವ್ಯಾಣಿ

ಹರಿದ್ರಾಕುಂಕುಮ ಚೈವ ಸಿಂಧೂರಂ ಕಜ್ಜಲಂ ತಥಾ ।
ಸೌಭಾಗ್ಯ ದ್ರವ್ಯಮೇತಾನಿ ಗೃಹಾಣ ಪರಮೇಶ್ವರಿ ॥
ಶ್ರೀ ಲಲಿತಾಂಬಾಯ್ಯೈ ನಮಃ ಸೌಭಾಗ್ಯ ದ್ರವ್ಯಾಣಿ
ಸಮರ್ಪಯಾಮಿ

ಅಥ ಕುಂಕುಮಾರ್ಚನಂ

ದ್ವಾದಶನಾಮ, ನೂರೆಂಟು ನಾಮ, ಲಲಿತಾ ಸಹಸ್ರನಾಮ-ಆದಿಭಿಃ ಯಥಾವಕಾಶಂ ಕುಂಕುಮಾರ್ಚನಂ ಕುರ್ಯಾತ್

ಧೂಪಃ

ಸುಗುಗ್ಗುಲ್ಪಗುರೂ ಶೀರ ಗಂಧಾದಿ ಸುಮನೋಹರಂ ।
ಧೂಪಂ ಗೃಹಾಣ ದೇವೇಶಿ ದುರ್ಗೇದೇವಿ ನಮೋಸ್ತುತೇ ॥
ಶ್ರೀ ಲಲಿತಾಂಬಾಯ್ಯೈ ನಮಃ ಧೂಪಮಾಘ್ರಾಪಯಾಮಿ

ದೀಪಂ

ಪಟ್ಟಸೂತ್ರೋಲ್ಲಸದ್ವರ್ತಿ ಗೋಘೃತೇನ ಸಮನ್ವಿತಂ ।
ದೀಪಂ ಜ್ಞಾನಪ್ರದಂ ದೇವಿ ಗೃಹಾಣಪ್ರೀತಯೆರ್ಪಿತಂ
ಶ್ರೀ ಲಲಿತಾಂಬಾಯ್ಯೈ ನಮಃ ದೀಪಂದರ್ಶಯಾಮಿ

shrinathudupa@gmail.com

ನೈವೇದ್ಯಂ

ಜುಷಾಣ ದೇವಿ ನೈವೇದ್ಯಂ ನಾನಾಭಕ್ಷ್ಯ ಸಮನ್ವಿತಂ ।
ಪರಮಾನ್ನಂ ಮಾಯಾದತ್ತಂ ನೈವೇದ್ಯಂ ಪ್ರತಿಗೃಹ್ಯತಾಂ ॥
ಕದಳೀ ನಾಳಿಕೇರೈಶ್ಚ ಚಣಕೈಶ್ಚ ಸಮನ್ವಿತಂ ।
ದ್ರಾಕ್ಷಾಫಲೈಶ್ಚ ಖರ್ಜೂರೈರ್ದೇವಿತ್ವಾಂ ತೋಷಯಾಮ್ಯಹಂ ॥
ಶ್ರೀ ಲಲಿತಾಂಬಾಯೈ ನಮಃ ನೈವೇದ್ಯಂ ಸಮರ್ಪಯಾಮಿ.

ತಾಂಬೂಲಂ

ಪೂಗೀಫಲ ಸಮಾಯುಕ್ತಂ ನಾಗವಲ್ಲೀ ದಲೈರ್ಯುತಂ ।
ಚೂರ್ಣಕರ್ಪೂರ ಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಂ ॥
ಶ್ರೀ ಲಲಿತಾಂಬಾಯೈ ನಮಃ ತಾಂಬೂಲಂ ಸಮರ್ಪಯಯಮಿ

ಸುವರ್ಣಪುಷ್ಪಂ

ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತ ಪುಣ್ಯಫಲದ ಮತಃ ಶಾಂತಿಂ ಪ್ರಯಚ್ಛಮೇ ॥
ಶ್ರೀ ಲಲಿತಾಂಬಾಯೈ ನಮಃ ಸುವರ್ಣಪುಷ್ಪಂ ಸಮರ್ಪಯಾಮಿ

ನೀರಾಜನಂ

ಪಟ್ಟಸೂತ್ರ ವಿಚಿತ್ರಾಢ್ಯೈಃ ಪ್ರಭಾಮಂಡಲ ಮಂಡಿತೈಃ ।
ದೀಪೈರ್ನೀರಾಜಯೇದ್ದೇವೀಂ ಪ್ರಣವಾ ದ್ಯೈಲ್ಚ ನಾಮಭಿಃ ॥
ಶ್ರೀ ಲಲಿತಾಂಬಾಯೈ ನಮಃ ಮಂಗಲ ನೀರಾಜನಂ ಸಮರ್ಪಯಾಮಿ

shrinath.udupa@gmail.com

ರಕ್ಷಾಧಾರಣಂ

ಸರ್ವಬಾಧಾಪ್ರಶಮನಂ ತ್ರೈಲೋಕ್ಯ ಸ್ಯಾಖಿಲೇಶ್ವರಿ ।
ಏವಮೇವ ತ್ವಯಾ ಕಾರ್ಯ ಮಸ್ಮದ್ವೈರಿ ವಿನಾಶನಂ ॥
ಶ್ರೀ ಲಲಿತಾಂಬಾಯೈ ನಮಃ ರಕ್ಷಾಂಧಾರಯಾಮಿ

ಮಂತ್ರಪುಷ್ಪಂ

ಅಮಲೇ ಕಮಲಾಲಯೇ ಕಥಂ ತ್ವಾಂ
ಸ್ತುತಿಭಿಃ ಸ್ತೋತು ಮಹಂ ಪ್ರಶಕ್ನುಯಾಂ ।
ಮಧು ಕೈಟಭ ಜೀವಿತಾಂತ ಭೂತೇ
ಶರಣಂಮೇ ಭವ ಶಂಭುವಲ್ಲಭೇ ॥

ಪರಮಾಗತಿ ರಂಬಿಕೇ ಮಮೇ ಮೌ
ಚರಣೌ ತೇ ಮಹಿಷಾಸುರ ಹಾರಿಣೌ ।
ಸುರಲೋಕ ಕದಂಬ ವಂದನೀಯೌ
ಸುಲಭೌ ಚಿಂತಯಿತುಂ ಸುಚೇತಸಾಂ ॥

ವಂದೇಹಂ ವಂದನೀಯಾನಾಂ ವಂದ್ಯಾಂ ಪಾಚಾ ಮಧೀಶ್ವರೀಂ ।
ಕಾಮಿತಾಶೇಷ ಕಲ್ಯಾಣ–ಕಲನಾ ಕಲ್ಪವಲ್ಲಿಕಾಂ ॥
ಸ್ತುವೀತ ಸ್ತೋತ್ರ ಮುಖ್ಯೈಶ್ಚ ಸಾಷ್ಟಾಂಗಂ ಪ್ರಣಮೇತ್ತತಃ ।
ಕೃತಾಂಜಲಿ ಪುಟೋ ಭಕ್ತ್ಯಾ ಪ್ರಾರ್ಥಯೇ ದಂಬಿಕಾಂ ಶಿವಾಂ ॥
ಶ್ರೀ ಲಲಿತಾಂಬಾಯೈ ನಮಃ ಮಂತ್ರಪುಷ್ಪಂ ಸಮರ್ಪಯಾಮಿ

ಪ್ರದಕ್ಷಿಣಾ–ನಮಸ್ಕಾರಾಃ

ಸಪ್ತದ್ವೀಪ ಸಮುದ್ರಾಂತಾಂ ಕುಲಾಚಲ ನದೀಯುತಾಂ ।
ಯದ್ಗಾಂ ಪ್ರದಕ್ಷಿಣೀ ಕೃತ್ಯ ತುತ್ಪುಣ್ಯಂ ಕುರುಮೇ ಶುಭೇ ॥
ಶ್ರೀ ಲಲಿತಾಂಬಾಯೈ ನಮಃ ಪ್ರದಕ್ಷಿಣಂ ಸಮರ್ಪಯಾಮಿ

shrinath.vdatpa@gmail.com

ಸರ್ವಸ್ವರೂಪೇ ಸರ್ವಶೇ ಸರ್ವಶಕ್ತಿ ಸಮನ್ವಿತೇ ।
ಭಯೇಭ್ಯಸ್ತ್ರಾಹಿನೋ ದೇವಿ ದುರ್ಗೇದೇವಿ ನಮೋಸ್ತುತೇ ॥
ಶ್ರೀ ಲಲಿತಾಂಬಾಯೈ ನಮಃ ನಮಸ್ಕಾರಾನ್ ಸಮರ್ಪಯಾಮಿ

ಪ್ರಾರ್ಥನಾ

ಪುತ್ರಾನ್ ದೇಹಿ ಧನಂ ದೇಹಿ ಸರ್ವಕಾಮಾಂಶ್ಚ ದೇಹಿಮೇ ।
ರೂಪಂ ದೇಹಿ ಜಯಂ ದೇಹಿ ಯಶೋ ದೇಹಿ ದ್ವಿಷೋಜಹಿ ॥
ಸರ್ವ ಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ ।
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತುತೇ ॥
ದೀರ್ಘಮಾಯುಃ ಸದಾರೋಗ್ಯಂ ಕೋಶವೃದ್ಧಿರ್ಬಲಾನ್ವಿತಾ ।
ಮಮಾಸ್ತು ನಿತ್ಯಮಾನಂದಂ ಪ್ರಸಾದಾತ್ತೇ ಮಹೇಶ್ವರಿ ॥
ಶ್ರೀ ಲಲಿತಾಂಬಾಯೈ ನಮಃ ಪ್ರಾರ್ಥಯಾಮಿ

ಪ್ರಸನ್ನಾರ್ಘ್ಯಂ

ಜಯಾ ಚ ಮಂಗಲಾ ಕಾಲೀ ಭದ್ರಕಾಲೀ ಕಪಾಲಿನೀ ।
ದುರ್ಗಾ ಕ್ಷಮಾ ಶಿವಾ ಧಾತ್ರೀ ಸ್ವಧಾ ಸ್ವಾಹಾ ನಮೋಸ್ತುತೇ ॥
ಶ್ರೀ ಲಲಿತಾಂಬಾಯೈ ನಮಃ ಪ್ರಸನ್ನಾರ್ಘ್ಯಂ ಸಮರ್ಪಯಾಮಿ

ಪ್ರಸಾದ ಸ್ವೀಕಾರಃ

ಮುಕ್ತಕೇಶಾಧ್ಯಯಃ ಲಲಿತಾಪ್ರಸಾದಂ ಪ್ರತಿಗೃಹ್ಣಂತು ಭವತ್ಯಃ- (ಎಂದು ಒಂದು ಹೂವನ್ನು ಕೆಳಕ್ಕೆ ಹಾಕಿ)ಮತ್ತೊಂದು ಹೂವನ್ನು ಸ್ವೀಕರಿಸುವುದು.
ಜಗದಂಬಾ ಪ್ರಸಾದೇನ ಸಮಸ್ತಮನೋರಥಾವಾಪ್ತಿರಸ್ತು.

ಸಮರ್ಪಣೆ

ಗುಹ್ಯಾತಿ ಗುಹ್ಯಗೋಪ್ತ್ರೀತ್ವಂ ಗೃಹಾಣಾಸ್ಮತ್ ಕೃತಂ ಜಪಂ ।
ಸಿದ್ಧಿರ್ಭವತು ಮೇ ದೇವಿ ಪ್ರಸಾದಾತ್ ತೇ ಮಯಿಸ್ಥಿತಾತ್ ॥

ಬ್ರಹ್ಮಾರ್ಪಣಂ

ಅಸ್ಮಿನ್ ಭಾರ್ಗವವಾಸರೇ ಮಯಾಕೃತೇನ ಕುಂಕುಮಾರ್ಚನೇನ ತದಂಗ ಪೂಜನೇನ ಚ ಕರ್ಮಣಾ ಭ ಗ ವ ತೀ ಸರ್ವದೇವಾತ್ಮಿಕಾ ಶ್ರೀ ಲಲಿತಾಂಬಾ ಪ್ರೀಯತಾಂ—(ಎಂದು ಅಕ್ಷತೆ-ನೀರನ್ನು ಬಿಡುವುದು).

ಕ್ಷಮಾಪ್ರಾರ್ಥನಾ

ಕರ್ಮ ಕಾಲೇಸಮುದ್ಭೂತ ಸಮಸ್ತದೋಷ ಪರಿಹಾರಾರ್ಥಂ ನಾಮ ತ್ರಯ ಜಪಮಹಂ ಕರಿಷ್ಯೇ

ಅಚ್ಯುತಾಯ ನಮಃ ।
ಅನಂತಾಯ ನಮಃ ।
ಗೋವಿಂದಾಯ ನಮಃ ॥

ಶ್ರೀ ಲಲಿತಾ ಮಹಾತ್ರಿಪುರ ಸುಂದರ್ಯೈ ನಮಃ

ವಿಸರ್ಜನ

ಸ್ವಾಮಿನಿ ಅಖಿಲ ಲೋಕೇಶಿ ಯಾವತ್ ಚಂದ್ರದಿವಾಕರೌ ।
ತಾವತ್ ತ್ವಂ ಪ್ರೀತಿಭಾವೇನ ಮೂಲಬಿಂಬೇ ಸನ್ನಿಧಿಂ ಕುರು ॥

ಆವಾಹನಂ ನ ಜಾನಾಮಿ ನ ಜಾನಾಮಿ ವಿಸರ್ಜನಂ ।
ಪೂಜಾವಿಧಿಂ ನ ಜಾನಾಮಿ ಕ್ಷಮಸ್ವ ಪರಮೇಶ್ವರಿ ॥

ಯಾಂತು ದೇವಗಣಾಃ ಸರ್ವೇ ಪೂಜಾ ಮಾದಾಯ ಮತ್ಕೃತಾಂ ।
ಇಷ್ಟಕಾಮ್ಯಾರ್ಥ ಸಿದ್ಧ್ಯರ್ಥಂ ಪುನರಾಗಮನಾಯ ಚ ॥

॥ ಶ್ರೀ ಲಲಿತಾಂಬಾರ್ಪಣಮಸ್ತು ॥

ಅವಿವಾಹಿತ ಕನ್ಯೆಯರಿಗಾಗಿ

ಮಮ.... ನಕ್ಷತ್ರೇ, ...ರಾಶೌಜಾತಾಯಾಃ,....ನಾಮ್ನ್ಯಾಃ, ಸಮಸ್ತ ಗ್ರಹಚಾರ ಪೀಡಾ ಪರಿಹಾರ ದ್ವಾರಾ, ನಿರ್ವಿಘ್ನೇನ ಶೀಘ್ರಮೇವ, ವಿದ್ಯಾ-ವಯೋ-ಧಿಕಾರ-ರೂಪಾ-ನು ರೂಪ-ವರೇಣ ಸಾಕಂ ವಿವಾಹ ಭಾಗ್ಯ ಸಿದ್ಧ್ಯರ್ಥಂ ಶ್ರೀ ಜಗದಂಬಾ ಪ್ರೀತ್ಯರ್ಥಂ ಏಕ ವಿಂಶತಿ ಪ್ರದಕ್ಷಿಣ ನಮಸ್ಕಾರಂ ಕರಿಷ್ಯೇ—

ಎಂದು ಸಂಕಲ್ಪಿಸಿ, ದೇವೀ ಬಿಂಬಕ್ಕೆ ಅರಶಿನ-ಕುಂಕುಮ-ಪುಷ್ಪ ಮುಂತಾದ ಮಂಗಲದ್ರವ್ಯಗಳನ್ನು ಭಕ್ತಿಯಿಂದ ಸಮರ್ಪಿಸಿ, ಏನಾದರೂ ನೈವೇದ್ಯವನ್ನು ನಿವೇದಿಸಿ, ನಿಂತಲ್ಲಿಯೇ 4 ಸುತ್ತು ಪ್ರದಕ್ಷಿಣೆ ಬಂದು ಒಂದು ನಮಸ್ಕಾರ ಮಾಡುವುದು. ಆಗ ಬಾಯಿಯಲ್ಲಿ—

ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತುತೇ ॥

ಎಂದು ಉಚ್ಚರಿಸಬೇಕು. ಇಂತಹ ನಮಸ್ಕಾರಗಳು ಒಂದು ದಿನಕ್ಕೆ 21. 21 ದಿನಗಳ ಕಾಲ ಬಿಡದೇ ಮಾಡಬೇಕು. 21ನೆಯ ದಿವಸ ಚಿಕ್ಕ (ಋತುಮತಿಯಾಗದ) ಕನ್ಯೆಯೊಬ್ಬಳಿಗೆ ಯಥಾಶಕ್ತಿ ಮಂಗಲದ್ರವ್ಯಗಳನ್ನಿತ್ತು ನಮಸ್ಕರಿಸುವುದು. ನಮಸ್ಕಾರವಾದ ಮೇಲೆ—

ಪತಿಂ ಮನೋರಮಂ ದೇಹಿ ಮನೋವೃತ್ತಾನುಸಾರಿಣಂ ।
ತಾರಿಣಂ ದುರ್ಗ ಸಂಸಾರಸಾಗರಸ್ಯ ಕುಲೋದ್ಭವಂ ॥

(ಮನಮೆಚ್ಚುವ, ನನ್ನ ಮನಸ್ಸಿನ ಅಭಿಪ್ರಾಯವನ್ನೇ ಹೊಂದಿರುವ, ಕುಲೀನನಾದ, ಈ ಸಂಸಾರಸಾಗರವನ್ನು ದಾಟಲು ಸಹಾಯಕನಾದ, ಪತಿಯನ್ನು ಅನುಗ್ರಹಿಸು.) ಈ ಮಂತ್ರವನ್ನು ಕೊನೆಯಪಕ್ಷ 8 ಬಾರಿ ದೇವಿಯ ಮುಂದೆ ಕುಳಿತು ಪಠಿಸಿ ಅಭೀಷ್ಟ ಪ್ರಾರ್ಥನೆ ಸಲ್ಲಿಸುವುದು.

ಸೂಚನೆಗಳು : (1) 21 ದಿನಗಳ ಕಾಲ ಬಿಡದೇ ಅನುಷ್ಠಾನ ಮಾಡಲು ಅನುಕೂಲವಾಗುವ ದಿನಗಳನ್ನು ಆರಿಸಿಕೊಳ್ಳುವುದು. (2) ಬೆಳಿಗ್ಗೆ ಸಾಧ್ಯವಾದಷ್ಟು ಬೇಗ ಸ್ನಾನ ಮಾಡಿ, ಯಾವ ಆಹಾರವನ್ನೂ ಸ್ವೀಕರಿಸದೆ ಭಕ್ತಿಯಿಂದ ನಮಸ್ಕರಿಸುವುದು. (3) ಒಂದು ಅನುಷ್ಠಾನವನ್ನು 21 ದಿನಕ್ಕೆ ಕೊನೆಗೊಳಿಸಿ, ಮತ್ತೊಮ್ಮೆ ಋತುಧರ್ಮವನ್ನು ಕಳೆದುಕೊಂಡು ಎರಡನೆಯ ಬಾರಿ ಆರಂಭಿಸಿ 21 ದಿನಗಳ ಕಾಲ ನಡೆಯಿಸುವುದು. (4) ಅತಿ ಶ್ರದ್ಧಾಭಕ್ತಿಯಿಂದ ಆಚರಿಸುವಲ್ಲಿ ಕೇವಲ ಮೂರು ಪರ್ಯಾಯಗಳಲ್ಲಿ ಫಲ ಸಿದ್ಧಿಯಾಗುವುದು.

shrinathudupa@gmail.com